ದಾಖಲಿಸುವ, ತಲೆಮಾರಿನಿಂದ ತಲೆಮಾರಿಗೆ, ಒಂದು ಭೂಗೋಳದಿಂದ ಮತ್ತೊಂದಕ್ಕೆ ಪಸರಿಸುವ ಮಾಧ್ಯಮವಾಗುತ್ತದೆ. ಮೊದಲಿಗೆ ಮೌಖಿಕವಾಗಿ, ಕಂಠಪಾಠ ಮಾಡಿ ನೆನಪನ್ನು ನೆನಪುಗಳ ಮೂಲಕವೇ ಪ್ರಸಾರ ಮಾಡುವ ಹಂತದಿಂದ ಬರಹದಲ್ಲಿ ದಾಖಲಿಸುವ, ದಾಖಲಿಸಿದ್ದನ್ನು ಕಾಪಿಡುವತ್ತ ನಮ್ಮ ಸಂಸ್ಕೃತಿ ಬೆಳೆದಿದೆ. ಈ ದಾಖಲಿಸುವ ಪ್ರಕ್ರಿಯೆಯಲ್ಲಿ ತಂತ್ರಜ್ಞಾನದ ಪಾತ್ರ ಮಹತ್ವದ್ದು. ಆದರೆ, ಕಾಪಿಡುವ ಮಾಧ್ಯಮ ತಂತ್ರಜ್ಞಾನದಿಂದ ಬದಲಾಗುತ್ತಿದೆಯೇ ಹೊರತು, ಆ ಪ್ರಕ್ರಿಯೆಯ ಮೂಲಭೂತ ಆಶಯ ಮತ್ತು ದಾಖಲಿಸುವ, ದಾಖಲಿಸಿದ್ದನ್ನು ಜಾಗೃತಗೊಳಿಸುವ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ. ಹೀಗಾಗಿಯೇ, ಬರವಣಿಗೆ, ದಾಖಲಾತಿಯ ಪ್ರಕ್ರಿಯೆ ಮತ್ತು ಸಂಗ್ರಹದ ತಂತ್ರಗಳು ಅತ್ಯಂತ ಪ್ರಮುಖವಾದ ಪಾತ್ರವನ್ನು ವಹಿಸುತ್ತವೆ. ಇದು ಸದಾಕಾಲಕ್ಕೆ, ಚರಿತ್ರೆಯಲ್ಲಿ ದಾಖಲಾಗುವ ವಿಷಯ. ಮುಂದೊಂದು ದಿನ ನಮ್ಮನ್ನರಿಯದವರು ನಮ್ಮ ಕಾಲದ ವಿಷಯಗಳನ್ನು ಅಧ್ಯಯನ ಮಾಡಿ ಮರುವ್ಯಾಖ್ಯಾನ ಮಾಡಬಹುದಾದ್ದರಿಂದ ಈ ದಾಖಲಾತಿಯು ನಿರಂಕುಶ ಪ್ರವೃತ್ತಿಯವರಿಗೆ ಆತಂಕವನ್ನುಂಟು ಮಾಡುವುದು ಸಹಜವೇ. ಇಲ್ಲವಾದಲ್ಲಿ, ವ್ಯಾಪಕವಾಗಿ ಅನಕ್ಷರತೆ ಇದ್ದ ಸಂದರ್ಭದಲ್ಲೂ ಪುಸ್ತಕಗಳನ್ನು ನಿಷೇಧಿಸುವ ಪ್ರಕ್ರಿಯೆ ಯಾಕಿರಬೇಕಿತ್ತು?

ಜಾರ್ಜ್ ಆರ್ವೆಲ್‌ರ ಕಾದಂಬರಿ 1984ರಲ್ಲೇ ಪುಸ್ತಕಗಳ ಮಹತ್ವದ ಕುರಿತು ಯೋಚಿಸಿದೆ. ಆ ಕಾದಂಬರಿಯಲ್ಲಿ – ಸತ್ಯಕ್ಕೆಂದೇ ಒಂದು ಪ್ರತ್ಯೇಕ ಮಂತ್ರಾಲಯವಿದೆ; ಆ ಮಂತ್ರಾಲಯದ ಕೆಲಸ ಪ್ರತಿದಿನವೂ ಬಿಗ್ ಬ್ರದರ್ ಎನ್ನುವ ನಿರಂಕುಶವಾದಿಗೆ ಅನುಕೂಲವಾದಂತೆ ಘಟನೆಗಳನ್ನು ಮರುನಿರೂಪಿಸುವುದು. ಅದನ್ನು ಮರುನಿರೂಪಿಸುತ್ತಾ ಬರೇ ವರ್ತಮಾನದ ವಾರ್ತೆಗಳನ್ನು ಸೃಷ್ಟಿಸುವುದಲ್ಲ – ಬದಲಿಗೆ ಭೂತಕಾಲಕ್ಕೂ ಹೋಗಿ ದಾಖಲೆಗಳನ್ನು ತಿದ್ದುವ ಮತ್ತು ವರ್ತಮಾನದ ವರ್ತನೆಗೆ ಅನುಕೂಲವಾಗುವಂತೆ, ಎಲ್ಲವನ್ನೂ ಮರುಸೃಷ್ಟಿಸುವ ಕೆಲಸ. ಆ ಪ್ರಹಸನವೇ ನಮಗೆ ಪುಸ್ತಕಗಳ ಮಹತ್ವವನ್ನು ನಿರೂಪಿಸಲು ಸಾಕಷ್ಟು ಗ್ರಾಸವನ್ನೊದಗಿಸುತ್ತದೆ.

ಆಫ್ಘಾನಿಸ್ತಾನದ ಬಾಮಿಯಾನ್ ಪ್ರದೇಶದಲ್ಲಿ ಕಲ್ಲುಬಂಡೆಗಳ ಮೇಲೆ ಮೂಡಿಸಿದ್ದ ಬುದ್ಧನ ಶಿಲ್ಪಾಕಾರಗಳನ್ನು ತಾಲಿಬಾನಿಗಳು ಅನೇಕ ವರ್ಷಗಳ ಕೆಳಗೆ ಧ್ವಂಸ ಮಾಡಿದರು. ಈ ಬಗ್ಗೆ ಕ್ಯಾರಿಯೆ ಒಂದು ವಿಚಾರವನ್ನು ಹೇಳುತ್ತಾರೆ. ಬುದ್ಧನ ಕಾಲಾನಂತರ ಮೊದಲ ಕೆಲವು ಶತಮಾನಗಳ ಕಾಲ ಬುದ್ಧನ ಪ್ರತೀಕವಾಗಿ ಆತನ ಅನುಪಸ್ಥಿತಿಯನ್ನೇ ಚಿತ್ರಿಸಲಾಗುತ್ತಿತ್ತು – ಖಾಲಿ ಕುರ್ಚಿ, ಹೆಜ್ಜೆಗುರುತುಗಳು, ಬೋಧಿವೃಕ್ಷದ ನೆರಳು, ಸವಾರನಿಲ್ಲದ ಜೀನುಧಾರಿ ಕುದುರೆ... ಹೀಗೆ. ಬಹುಶಃ ವ್ಯಕ್ತಿಯ ರೂಪಕ್ಕಿಂತ ವಿಚಾರಗಳು ಮುಖ್ಯ ಎನ್ನುವುದನ್ನು ಇವು ಸಂಕೇತಿಸಬಹುದು. ಅಲೆಕ್ಸಾಂಡರ್ ಮಧ್ಯ ಏಷ್ಯಾವನ್ನು ಆಕ್ರಮಿಸಿಕೊಂಡಾಗ, ಗ್ರೀಕರ ಪ್ರಭಾವದಿಂದಾಗಿ ಬುದ್ಧನಿಗೆ ಒಂದು ಭೌತಿಕ ರೂಪವನ್ನು ಕೊಡುವ ಪ್ರಕ್ರಿಯೆ ಆರಂಭವಾಯಿತು. ಹೀಗಾಗಿ ಬಾಮಿಯಾನ್ ಪ್ರಾಂತದಲ್ಲಿ ಬುದ್ಧನ ಪ್ರತಿಮೆಗಳ ವಿಧ್ವಂಸ, ಒಂದು ರೀತಿಯಿಂದ ಬೌದ್ಧ ಧರ್ಮದ ಮೂಲಭೂತ ನಡಾವಳಿಯೆಡೆಗೆ ವಾಪಸ್ಸಾದಂತಿರಬಹುದೇ ಎನ್ನುತ್ತಾರೆ. ಪುಸ್ತಕದ ಭೌತಿಕತೆಯಲ್ಲಿ ಅಡಕವಾಗಿರುವುದೂ ಇದೇ ಸೂತ್ರ. ಯಾವುದೇ ವಿಚಾರವನ್ನು ಪ್ರತಿಪಾದಿಸಿದವರ ವ್ಯಕ್ತಿತ್ವ ಹೇಗಿತ್ತು ಎನ್ನುವುದಕ್ಕಿಂತ ಮುಖ್ಯವಾಗಿ ಆ ವಿಚಾರ ಯಾವ ದಿಕ್ಕಿನಲ್ಲಿತ್ತು ಎನ್ನುವ ಚರ್ಚೆ ಪ್ರಮುಖವಾಗುತ್ತದೆ.

ತಂತ್ರಜ್ಞಾನದ ಆವಿಷ್ಕಾರದಿಂದ ಭೌತಿಕ ಪುಸ್ತಕದ ಪ್ರಕಟಣೆಗೆ ಯಾವ ಕುತ್ತೂ ಬಂದಿಲ್ಲ ಎನ್ನುವುದನ್ನು ವಾದಿಸುತ್ತಲೇ, ಗುಣಮಟ್ಟದ ಸವಾಲುಗಳನ್ನು ತಂತ್ರಜ್ಞಾನ ಹೇಗೆ ಹುಟ್ಟುಹಾಕಿದೆ ಎನ್ನುವುದನ್ನು ಚರ್ಚಿಸುತ್ತಾರೆ. ಮುದ್ರಣ ಮತ್ತು ಪ್ರಸಾರ ಎರಡೂ ವಿಕಸನಗೊಂಡಿವೆ. ಸಾಮಾಜಿಕ ಜಾಲತಾಣಗಳ ಬೆಳವಣಿಗೆಯಿಂದಾಗಿ ವಿಚಾರಗಳ ಲಗಾಮಿಲ್ಲದ ಪ್ರಸಾರ ಸಾಧ್ಯವಾಗಿದೆ. ಆದರೆ, ಸಾಮಾಜಿಕ ಜಾಲತಾಣದಲ್ಲಿ ಕಾಲಕಳೆದಂತೆ ಯಾವುದನ್ನು ಗಂಭೀರವಾಗಿ ಪರಿಗಣಿಸಬೇಕು, ಮತ್ತು ಯಾವುದು ಫೇಕ್ ಎನ್ನುವುದನ್ನು ಕಂಡುಕೊಳ್ಳುವುದನ್ನೂ ನಾವು ಮೈಗೂಡಿಸಿಕೊಂಡಿದ್ದೇವೆ. ಹಿಂದೆ ಯಾವುದಾದರೂ ವಿಚಾರ ಪ್ರಕಟವಾಗಬೇಕಿದ್ದರೆ ಅದಕ್ಕೆ ಸಂಪಾದಕರ